# ದ್ವಿತೀಯ ಪಿಯುಸಿ ಪೂರ್ವಸಿದ್ಧತಾ ಪರೀಕ್ಷೆ, ಜನವರಿ/ಫೆಬ್ರವರಿ 2023

## ವಿಷಯ : ಕನ್ನಡ (01)

ಅಂಕಗಳು : 100

ಸಮಯ : 3 ಗಂಟೆ 15 ನಿಮಿಷಗಳು

### ಅ – ಬಹು ಆಯ್ಕೆ ಪ್ರಶ್ನೆ ವಿಭಾಗ

10x1=10

**I ಅ.** ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.

1. ಸೌಮಿತ್ರಿ ಎಂದರೆ ಯಾರು ?
   ಅ) ವಿಭೀಷಣ ಆ) ರಾಮ ಇ) ರಾವಣ ಈ) ಲಕ್ಷ್ಮಣ
2. ಬಸವಣ್ಣನವರ ವಚನಗಳ ಅಂಕಿತ ಯಾವುದು ?
   ಅ) ಗುಹೇಶ್ವರ ಆ) ಕೂಡಲಸಂಗಮದೇವ ಇ) ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಈ) ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
3. ಧರ್ಮರಾಯನಿಗೆ ಎಂತಹ ಗರ ಹೊಡೆದಿದೆ ?
   ಅ) ಧರ್ಮ–ಕ್ಷಮೆ ಆ) ಶೌರ್ಯ ಇ) ಮಮತೆ ಈ) ಮಾನಾರ್ಥ
4. ಎಣ್ಣೆಯಲ್ಲಿ ನೆನೆದ ಬತ್ತಿ ಹೇಗೆ ಕಾಣುತ್ತದೆ ?
   ಅ) ತೈಲದಂತೆ ಆ) ತಮದಂತೆ ಇ) ಭಕ್ತನಂತೆ ಈ) ದೀಪದಂತೆ
5. ವಾಲ್‌ಪರೈನ ಬಂದ ಬ್ರಿಟಿಷ್ ಪ್ರಜೆ ಯಾರು ?
   ಅ) ಕೃಪಾಕರ ಆ) ಸೇನಾನಿ ಇ) ಕಾರ್ವೆರ್ ಮಾರ್ಷ್ ಈ) ಪೂಣಚ್ಚಿ
6. ಕನ್ನಡದ ಮೂಲಕ ಕಲಿತು ಶ್ರೇಷ್ಠವಿಜ್ಞಾನಿಯಾದವರು ಯಾರು ?
   ಅ) ಎ. ಆರ್. ಕೃಷ್ಣಶಾಸ್ತ್ರಿ ಆ) ಸಿ.ಎನ್.ಆರ್. ರಾವ್ ಇ) ಹಾಮಾನಾ ಈ) ರಾಜಮನ್ನಾರ್
7. ವಿಜ್ಞಾನದ ಅಡಿಪಾಯ ಯಾವುದು ?
   ಅ) ಪ್ರಶ್ನೆ ಕೇಳುವುದು ಆ) ಸಂದರ್ಶನ ನಡೆಸುವುದು ಇ) ಚರ್ಚೆ ಮಾಡುವುದು ಈ) ಕ್ರಿಯಾಶೀಲವಾಗಿರುವುದು
8. ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು ?
   ಅ) ಪುಟ್ಟಯ್ಯ ಆ) ಜುಬೇದ್ ಇ) ಜಬ್ಬಾರ್ ಈ) ಶಿವೇಗೌಡ
9. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು ?
   ಅ) ಟೆಲಿಫೋನ್ ಆ) ಫಾರೆಸ್ಟ್ ಇ) ಎಲೆಕ್ಟ್ರಿಕ್ ಈ) ಪಿಡಬ್ಲ್ಯುಡಿ
10. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು ?
    ಅ) ದುರ್ಗಪ್ಪ ಆ) ಖಾನ್‌ಸಾಹೇಬ್ ಇ) ಶಿಪ್ಪಣ್ಣ ಈ) ರಮೇಶ್

**ಆ. 11. ಹೊಂದಿಸಿ ಬರೆಯಿರಿ.** 5x1=5

| | |
|---|---|
| 1) ಹರಹರಾ ಶ್ರೀಚೆನ್ನ ಸೋಮೇಶ್ವರ | 1. ತಾಯಿ |
| 2) ಜಾಲಿಯ ಮರ | 2. ಮನ್ಮಥ |
| 3) ತವರಿಗೆ ತಂಪು | 3. ಒಂದು ಹೂ ಹೆಚ್ಚಿಗೆ ಇಡುತೀನಿ |
| 4) ಹೂಬಾಣ | 4. ಪುಲಿಗೆರೆ ಸೋಮನಾಥ |
| 5) ಲಲಿತಾ ಸಿದ್ಧಬಸವಯ್ಯ | 5. ದುರ್ಜನರು |
| | 6. ಒಮ್ಮೆ ನಗುತ್ತೇವೆ |

**ಇ. 12. ಕೊಟ್ಟಿರುವ ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** 5x1=5

(ಚಂದ್ರಭವನ, ರಾಮಾಯಣ, ವೆಂಕಪ್ಪಯ್ಯ, ನಿಶಾಶರ್ಮ, ಕಣ್ಣುನೋವು)

ಅ) ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ________

ಬ) ದುರಾಸೆ ಹುಡುಗನನ್ನು ನಿರಾಕರಿಸಿದವರು ________

ಕ) ಧಣಿಗಳ ಹೆಸರು ________

ಡ) ________ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು.

ಇ) ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರು ________

(P.T.O)

## ಆ ವಿಭಾಗ

**II** ಅ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ. **4x2=8**

13. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ ?
14. ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ ?
15. ಮಗುವು ಏನನ್ನು ಕುಡಿದು ಬೆಳೆಯುವುದು ?
16. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?
17. ದನಗಳಿಗೆ ಜನಗಳಿಗೆ ಏನೇನು ಇಲ್ಲ ?

ಆ. ಯಾವುದಾದರೂ ಮೂರು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ. **3x2=6**

18. ಬಸಲಿಂಗನಿಗೆ ಅದು ಮರುಸೊತ್ತಿಲ್ಲದ ಕಾಲ ಏಕೆ ?
19. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?
20. ಮುದ್ದಣ್ಣನನ್ನು ಮನೋರಮೆ ಹೇಗೆ ಉಪಚರಿಸಿದಳು ?
21. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ ?

ಇ. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ. **4x2=8**

22. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ ?
23. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ ?
24. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು ?
25. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?
26. ತನ್ನ ಕೆಲಸ ಅತ್ಯಂತ ಅಪಾಯಕಾರಿ ಎಂದು ದುರ್ಗಪ್ಪ ವಿವರಿಸಿದ್ದು ಹೇಗೆ ?

## ಇ ವಿಭಾಗ

**III** ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ-ಸ್ವಾರಸ್ಯ ವಿವರಿಸಿ. **2x3=6**

27. "ಕದಡಿದ ಸಲಿಲಂ ತಿಳಿವಂದದೆ".
28. "ಕಲಿಭೀಮನೇ ಮಿಡುಕುಳ್ಳ ಗಂಡನು".
29. "ಬಲೆಬೀಸಿ ಬಂದ, ಅಗೋ ಬೆಳಕು-ಬೇಟೆಗಾರ".

ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ-ಸ್ವಾರಸ್ಯ ವಿವರಿಸಿ. **1x3=3**

30. "ಕನ್ನಡಿಗರು ಮೊದಲು ಕನ್ನಡಿಗರಾಗಬೇಕು".
31. "ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು".

ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ-ಸ್ವಾರಸ್ಯ ವಿವರಿಸಿ. **1x3=3**

32. "ಡ್ರೈವರಣ್ಣ ಎತ್ಲಾಗಿ ಹೋದ ! ಇಲ್ಲೇ ಇದ್ದನಲ್ಲ".
33. "ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ.

## ಈ ವಿಭಾಗ

**IV** ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **2x4=8**

34. ಉರಿಲಿಂಗಪೆದ್ದಿಯ ವಚನಗಳಲ್ಲಿನ ಆಶಯವೇನು ?
35. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು ?
36. ಜ್ಞಾನವನ್ನು ಹೊಂದುವ ಮಾರ್ಗ ಯಾವುವು ಎಂಬುದನ್ನು ಕವಿ ಪುಲಿಗೆರೆ ಸೋಮನಾಥನು ಹೇಗೆ ವಿವರಿಸಿದ್ದಾನೆ ?
37. 'ಹಬ್ಬಲಿ ಅವರ ರಸಬಳ್ಳಿ' ಪದ್ಯದಲ್ಲಿ ಗರತಿಯು ತವರಿಗೆ ಏನೆಂದು ಹರಸುತ್ತಾಳೆ ?

ಆ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ **1x4=4**

38. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?
39. ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ ?
40. ಧಣಿ ಮತ್ತು ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ಇ. ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=4

41. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.
42. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು ?
43. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು ?

ಉ ವಿಭಾಗ 1x5=5

V ಅ. ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.

44. ಪೊಸಗಾರ ಸಿಡಿಲ ಮಸಕಮ
ನಸಕಟೆದು ಕೃತಾಂತಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸಸೆಂದು ಕರಮ
ಪ್ಪಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್

ಅಥವಾ

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ
ಕೇಕು, ಚಳಿ, ನಕ್ಷತ್ರದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ

ಭಾಷಾಭ್ಯಾಸ 6x2=12

VI ಅ. ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ.

45 ಕೊಟ್ಟಿರುವ ಎರಡು ಪದಗಳಿಗೆ ಸಮಾನಾರ್ಥಕ ಬರೆಯಿರಿ.
ಕಾಂತಾರ, ಮರ್ಕಟ, ಸಮುದ್ರ.
46. ಕೊಟ್ಟಿರುವ ಎರಡು ಪದಗಳಿಗೆ ತದ್ಭವರೂಪ ಬರೆಯಿರಿ.
ದೃಷ್ಟಿ, ಶ್ರೀ, ವೀರ.
47. ಯಾವುದಾದರೂ 2 ಅನ್ಯದೇಶ್ಯಗಳನ್ನು ಬರೆಯಿರಿ.
48. ಕೊಟ್ಟಿರುವ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
ಹಸಿರುಕಂಬಳಿ, ಶುದ್ಧನೀರು, ಘೋರಪಾಪಿ
49. ಕೊಟ್ಟಿರುವ ಎರಡು ಪದಗಳಲ್ಲಿನ ವಿಭಕ್ತಿಯನ್ನು ಹೆಸರಿಸಿ.
ಬಿಸಿಲಲ್ಲಿ, ಮನೆಯಿಂದ, ಕೀರ್ತಿಗೆ.
50. ಕೊಟ್ಟಿರುವ ಎರಡು ಪದಗಳಿಗೆ ಕಾಲಗಳನ್ನು ಬರೆಯಿರಿ.
ಬರುವಳು, ಹೋದನು, ಬರೆಯುತ್ತಾರೆ.
51. ಕೊಟ್ಟಿರುವ ಎರಡು ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಪ್ರಯೋಗಿಸಿರಿ.
ತಲೆಬಾಗು, ದಾರಿದೀಪ, ಗಾಳಿಸುದ್ದಿ.

ಆ. ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ 1x5=5

52. ಪರಿಸರ ಸಂರಕ್ಷಣೆ ಅಥವಾ ಜಾತ್ಯಾತೀತ ಸಮಾಜದ ಅಗತ್ಯ.

ಇ. ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 1x4=4

53. ಇತ್ತೀಚೆಗೆ ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಕುರಿತು ಗೆಳೆಯ ಅಥವಾ ಗೆಳತಿಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಉನ್ನತ ವ್ಯಾಸಂಗಕ್ಕಾಗಿ ಸಾಲಸೌಲಭ್ಯವನ್ನು ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

ಈ. ಈ ಕೆಳಗಿನ ಗಾದೆಗಳಲ್ಲಿ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 1x4=4

54. ಸಂತೋಷವೇ ಯೌವ್ವನ; ಚಿಂತೆಯೇ ಮುಪ್ಪು.

ಅಥವಾ

ದೇಶ ಸುತ್ತು, ಕೋಶ ಓದು.

*****